

ಚಿಕಿತ್ಸೆ ನಿರತ ವೈದ್ಯರ ಸಾಂಕೇತಿಕ ಚಿತ್ರ: ಎಚ್.ಜಿ. ಪ್ರಶಾಂತ್

ಮಾಡುವುದಿಲ್ಲ. ನಿಮಗೆ ಒಂದೊಮ್ಮೆ ವೈದ್ಯರ ರೀತಿ, ನೀತಿ ಸರಿಹೋಗದಿದ್ದರೆ, ಬೇರೆ ವೈದ್ಯರನ್ನು ಅರಸಿಕೊಳ್ಳಬಹುದು. ನಿಜಕ್ಕೂ ತೊಂದರೆ ಆಗಿದೆ ಎಂದರೆ ದೂರು ನೋಂದಾಯಿಸಿ; ಮೊಕದ್ದಮೆಯನ್ನೂ ಹೂಡಿ. ನ್ಯಾಯ ಪಡೆಯುವ ಹಕ್ಕು ಎಲ್ಲರಿಗೂ ಇದೆ. ಆದರೆ ಸಿಟ್ಟು ಬಂತೆಂದು ಗುಂಪುಗೂಡಿ ವೈದ್ಯರ ಮೇಲೆ ಹಲ್ಲೆ ನಡೆಸುವುದರಿಂದ ವೈದ್ಯಕೀಯ ವ್ಯವಸ್ಥೆಯ ಮೇಲೆಯೇ ದುಷ್ಪರಿಣಾಮ ಉಂಟಾಗುತ್ತದೆ. ಈ ಪ್ರಕರಣದ ಹಿನ್ನೆಲೆಯಲ್ಲಿ ವೈದ್ಯರೆಲ್ಲ ಸೇರಿ ಮುಷ್ಕರ ಹೂಡಿದ್ದರಿಂದಲೇ ಈಗ, ಆಸ್ಪತ್ರೆ ಸಿಬ್ಬಂದಿ ಮೇಲೆ ಯಾರು ಹಲ್ಲೆ ಮಾಡುತ್ತಾರೋ ಅವರಿಗೆ ಜೈಲು ಶಿಕ್ಷೆ ಹಾಗೂ ದಂಡ ವಿಧಿಸುವ ಕಾನೂನು ಜಾರಿಯಲ್ಲಿದೆ.

★ ಬೆಳಗಾವಿಯಲ್ಲಿ, ರಾಜ್ಯದ ಎಲ್ಲೆಡೆಯಿಂದ ನಲವತ್ತು ಸಾವಿರಕ್ಕೂ ಹೆಚ್ಚು ವೈದ್ಯರು ಸೇರಿ, ಕರ್ನಾಟಕ ರಾಜ್ಯದ ಖಾಸಗಿ ವೈದ್ಯಕೀಯ ತಿದ್ದುಪಡಿ ಮಸೂದೆಯನ್ನು (Karnataka Private Medical Esablishment Amendment –KPMEA 2017) ವಿರೋಧಿಸಿ, ಉಪವಾಸ ಸತ್ಯಾಗ್ರಹವನ್ನೂ ನಡೆಸಿದ್ದು ಹೊಸ ಬೆಳವಣಿಗೆ. ಮಸೂದೆಯಲ್ಲಿರುವ ಕೆಲವು ಅಂಶಗಳು ಬರಿಯ ವೈದ್ಯವಿರೋಧಿ ನೀತಿಯಷ್ಟೇ ಆಗಿರದೆ, ಸಮಾಜವಿರೋಧಿಯೂ ಆಗಿವೆ. ಈ ಮಸೂದೆಯು ಅಸಾಂವಿಧಾನಿಕವಾಗಿದ್ದು, ಸಮಾಜದ ಆರೋಗ್ಯ ಕಾಪಾಡುವಲ್ಲಿ ವಿಫಲವಾಗಿರುವ ಸರಕಾರ ತನ್ನ ತಪ್ಪನ್ನು ಮುಚ್ಚಿಹಾಕಲು, ಖಾಸಗಿ ವಲಯದವರ ಮೇಲೆ ಗೂಬೆ ಕೂರಿಸುವ ತಂತ್ರ ಎಂದು ಮಾಜಿ ಲೋಕಾಯುಕ್ತ ಸಂತೋಷ ಹೆಗ್ಡೆಯವರೇ ಬಹಿರಂಗ ಹೇಳಿಕೆ ಕೊಟ್ಟರು.

ಖಾಸಗಿ ವಲಯದಲ್ಲಿ ದುಡಿಯುವ ಬಹಳಷ್ಟು ವೈದ್ಯರಿಗೆ ಸರಕಾರದಿಂದ ಏನೂ ವಿಶೇಷ ಸೌಲಭ್ಯವಿಲ್ಲ. ಖಾಸಗಿ ಆಸ್ಪತ್ರೆಯ ಕ್ಲಿನಿಕ್/ಜಾಗ, ಕಟ್ಟಡ, ಸಲಕರಣೆ, ನಿರ್ವಹಣಾ ಸಿಬ್ಬಂದಿ, ನಿಭಾಯಿಸಲು ಬೇಕಾದ ಡಿಗ್ರಿ, ಜಾಣ್ಮೆ, ತಾಳ್ಮೆ, ಎಲ್ಲವೂ ಅವರ ಸ್ವಂತದ್ದೇ! ಹಾಗಿದ್ದಾಗ ಅವರ ಶುಲ್ಕವನ್ನು ನಿಗದಿಪಡಿಸುವ ಹಕ್ಕನ್ನು ಸರಕಾರ ಹೇಗೆ ತಾನೇ ಪಡೆದುಕೊಳ್ಳುತ್ತದೆ? ಪ್ರತಿಯೊಂದು ರೋಗವೂ ಭಿನ್ನವಿರುವಾಗ, ಅದರ ಪರಿಣಾಮವೂ ಭಿನ್ನವಿರುವಾಗ ಮೊದಲಿಗೇ ದರವನ್ನು ನಿಗದಿಪಡಿಸಿ ಪಟ್ಟಿ ಮಾಡಿ ಪ್ರದರ್ಶಿಸಲು ಅದೇನು ಹೋಟೆಲ್ ತಿಂಡಿಯೇ? ಇದಲ್ಲದೆ, ಕ್ಷುಲ್ಲಕ ಕಾರಣಕ್ಕೂ, ವೈದ್ಯರಾದವರನ್ನು ಸರಕಾರದ ಅಧಿಕಾರಿಗಳ ಮುಂದೆ ನಿಲ್ಲುವಂತೆ ಮಾಡಿ, ಜೈಲು ಕಂಬಿ ಎಣಿಸುವಂತೆ ಮಾಡುವ ಅಂಶವೂ ಈ ಕರಾಳ ಮಸೂದೆಯಲ್ಲಿ ಇತ್ತು. ಈ ಮುಷ್ಕರ ಹಣಕ್ಕಾಗಿ ಆಗಿರಲಿಲ್ಲ, ವೃತ್ತಿಯ ಘನತೆಯನ್ನು, ಮರ್ಯಾದೆಯನ್ನು ಕಾಪಾಡಲು ಆಗಿತ್ತು. ಸರಕಾರಿ ಆಸ್ಪತ್ರೆಗಳನ್ನೆಲ್ಲ ಈ ಕಟ್ಟುಪಾಡುಗಳಿಂದ ಹೊರ ಇಟ್ಟದ್ದು ಏನನ್ನು ಸೂಚಿಸುತ್ತದೆ? ಮಸೂದೆ ಜಾರಿಗೆ ತರಲು ಸಚಿವರಿಗೆ ನಾಲ್ಕೂವರೆ ವರ್ಷದಿಂದ ಪುರುಸೊತ್ತು ಸಿಗದೆ, ಚುನಾವಣೆಗೆ ಮುನ್ನ ಮುಹೂರ್ತ ಕೂಡಿ ಬಂದದ್ದು ಹೇಗೆ?

ವೈದ್ಯರು ಸಮಾಜದ ಮಧ್ಯೆಯೇ ಇದ್ದು ಬದುಕಬೇಕಾದವರು! ನಿಮ್ಮೆಲ್ಲ ದೈಹಿಕ ನೋವುಗಳಲ್ಲೂ ನೆರವಿಗೆ ಬರುವವರು. ಈ ಮಸೂದೆ ಜಾರಿಯಾಗಿದ್ದರೆ ದುಡ್ಡಿದ್ದರೂ ತಜ್ಞ ವೈದ್ಯರ ಸೇವೆ ಲಭ್ಯವಾಗದ ಸ್ಥಿತಿ ಒದಗಿ ಬರುತ್ತಿತ್ತು. ಒಂದೋ ಅವರು ಭಾರಿ ಬೆಲೆಯ ವಿಮೆಯ ಮೊರೆ ಹೋಗಬೇಕು, ಇಲ್ಲವೇ ಕಳಪೆ ಸೌಕರ್ಯಗಳುಳ್ಳ ಸರಕಾರಿ ಆಸ್ಪತ್ರೆಗಳಿಗೇ ಹೋಗಬೇಕು ಎನ್ನುವ ಪರಿಸ್ಥಿತಿ ಉಂಟಾಗುತ್ತಿತ್ತು. ಈಗ ಸರಕಾರ ಮಸೂದೆಯಿಂದ ಕೆಲವು ಅಂಶಗಳನ್ನು ಕೈ ಬಿಟ್ಟಿರುವುದು ವೈದ್ಯ ಸಮುದಾಯಕ್ಕೆ ತಾತ್ಕಾಲಿಕವಾದರೂ ಸ್ವಲ್ಪ ನೆಮ್ಮದಿ ಲಭಿಸಿದೆ.

★ ವೈದ್ಯಕೀಯ ಶಿಕ್ಷಣ ಹಾಗೂ ವೃತ್ತಿಯನ್ನು ನಿರ್ವಹಿಸಲು, ಅದರ ಮೇಲೆ ನಿಗಾ ಇಡಲು ರಚಿಸಲಾದ Medical Council of India (MCI) ಸ್ಥಾಪನೆಗೊಂಡದ್ದು ೧೯೩೪ರಲ್ಲಿ. ಇಡೀ ವ್ಯವಸ್ಥೆಯೇ ಭ್ರಷ್ಟಾಚಾರದ ಕೂಪವಾಗಿದ್ದು ನಿಜ. ಇದರ ಬಗ್ಗೆ ವೈದ್ಯರಿಗೂ, ಸಂಘಕ್ಕೂ ಅಸಮಾಧಾನವಿತ್ತು. ಇದರಲ್ಲೇ ಕೆಲವು ಕಾನೂನಾತ್ಮಕ ಬದಲಾವಣೆಗಳನ್ನು ತಂದು ಗುಣಮಟ್ಟ ಸುಧಾರಿಸಬೇಕಿದ್ದ ಸರಕಾರ, ಇನ್ನೊಂದು ಹೊಸದೇ ಆದ, ರಾಷ್ಟ್ರೀಯ ವೈದ್ಯಕೀಯ (National Medical Commission) ಆಯೋಗವನ್ನು ಯಾವುದೇ ವೈದ್ಯಕೀಯ ಸಂಘದ ಜೊತೆಗೆ ಮಾತುಕತೆಯನ್ನೇ ನಡೆಸದೆ, ಜಾರಿಗೆ ತರಲು ಹಠಾತ್ತನೆ ನಿರ್ಧರಿಸಿತು!

ಈ ಹೊಸ ಆಯೋಗದಲ್ಲಿ ಚುನಾಯಿತ ಸದಸ್ಯರ ಸಂಖ್ಯೆ ಕೇವಲ 5 ಮಾತ್ರ. ಉಳಿದವರೆಲ್ಲಾ ಆಡಳಿತ ಪಕ್ಷದಿಂದ ನೇಮಕಾತಿ! ಇದರಿಂದ ಭ್ರಷ್ಟಾಚಾರ ಇನ್ನಷ್ಟು ಹೆಚ್ಚಿ, ವೈದ್ಯಕೀಯ ಶಿಕ್ಷಣದ ಗುಣಮಟ್ಟ ಇನ್ನಷ್ಟು ಕುಸಿಯುವುದರಲ್ಲಿ ಸಂಶಯವೇ ಇಲ್ಲ. ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ಶೇಕಡಾ 60ರಷ್ಟು ಸೀಟುಗಳ ಶುಲ್ಕ ನಿಗದಿಪಡಿಸುವ ಹಕ್ಕನ್ನು ಈ ಆಯೋಗ ನೀಡಲಿದ್ದು, ಇದರಿಂದ ವೈದ್ಯಕೀಯ ಶಿಕ್ಷಣ ಬರೀ ಕಾಸಿದ್ದವರ ಸೊತ್ತಿನಂತೆ ಪರಿಣಮಿಸಬಹುದು!

ಇದರ ಜತೆಗೆ ಮುಂಬರುವ ದಿನಗಳಲ್ಲಿ, ಬೇರೆ ವೈದ್ಯಕೀಯ ಪದ್ಧತಿಗಳಾದ ಆಯುರ್ವೇದ, ಹೋಮಿಯೋಪತಿ, ಯುನಾನಿ, ಸಿದ್ಧಿ ಇತರ ವಿಷಯವನ್ನು ಕಲಿತವರಿಗೆಲ್ಲ ಕೆಲವೇ ತಿಂಗಳ ತರಬೇತಿ ನೀಡಿ ಆಧುನಿಕ ಅಲೋಪಥಿ ಪದ್ಧತಿಯ ಮದ್ದುಗಳನ್ನು ನೀಡುವ ಹಕ್ಕನ್ನು ಕೊಡಲಾಗುತ್ತದೆ! ಇದು ಹಳ್ಳಿಗರ ಜನರ ಆರೋಗ್ಯ ಕಾಪಾಡಲಂತೆ. ಅವರೇನು ಎರಡನೇ ದರ್ಜೆ ನಾಗರಿಕರೆ? ಯಾರು ಯಾವುದನ್ನು ಕಲಿತು ಪರಿಣತಿ ಹೊಂದಿರುತ್ತಾರೋ ಅದನ್ನೇ ಅಭ್ಯಸಿಸಬೇಕಲ್ಲವೇ? ಕನ್ನಡ ಟೀಚರ್ ಹೆರಿಗೆಗೆಂದು ಪರೀಕ್ಷೆ ಸಮಯಕ್ಕೇ ರಜೆ ಹಾಕಿ ಹೋದಾಗ, ಹಿಂದಿ ಟೀಚರನ್ನು ನಮಗೆ ಕನ್ನಡ ಕಲಿಸಲು ಬಿಟ್ಟಿದ್ದ ದಿನಗಳು ನೆನಪಾದವು! ಪಾಪ, ಆ ಮೇಡಂ, ನಮ್ಮಿಂದಲೇ ಅಷ್ಟೋ ಇಷ್ಟೋ ಕನ್ನಡ ಕಲಿತು, ಉತ್ತರಪತ್ರಿಕೆ ತಿದ್ದುವಂತಾಗಿತ್ತು! ಹೀಗೆ ಒಂದನ್ನು ಕಲಿತು, ಇನ್ನೊಂದನ್ನು ಪ್ರಾಕ್ಟೀಸು ಮಾಡಲು ಅಧಿಕೃತವಾಗಿ ಪರವಾನಗಿ ಕೊಟ್ಟರೆ, ಮುಂದೆ ರೋಗಿಗಳ ಜೀವಕ್ಕೇ ಅಪಾಯವಾಗುವುದಿಲ್ಲವೇ?

ಇಲ್ಲಿ ನಾವು ಮೇಲು, ಬೇರೆ ಪದ್ಧತಿ ಕೀಳು ಎಂಬ ಭಾವನೆ ಅಲ್ಲ. ಜನರು ಅವರಿಗೆ ಇಷ್ಟ ಬಂದ ವೈದ್ಯಪದ್ಧತಿಯಲ್ಲಿ ಪರಿಹಾರ ಹುಡುಕಬಹುದು. ಆದರೆ ಜನರ ಪ್ರಾಣದ ಜತೆಗೆ ಹೀಗೆ ಚೆಲ್ಲಾಟ ಆಡುವುದು ಎಷ್ಟು ಸರಿ? ಇದನ್ನು ದೊಡ್ಡ ಮಲ್ಟಿಸ್ಪೆಷಾಲಿಟಿ ಕಾರ್ಪೊರೇಟ್ ಆಸ್ಪತ್ರೆಗಳೇ ಬೆಂಬಲಿಸಿದ್ದು ವಿಪರ್ಯಾಸ. ಅವರಿಗೆ ಒಬ್ಬ ಎಂ.ಬಿ.ಬಿ.ಎಸ್. ವೈದ್ಯನಿಗೆ ಕೊಡುವ ಸಂಬಳವನ್ನು ಉಳಿಸಿ, ಅದರಲ್ಲಿ ನಾಲ್ಕು ಹೋಮಿಯೋಪಥಿ ಪಂಡಿತರನ್ನು ಇಟ್ಟುಕೊಂಡು ಆಸ್ಪತ್ರೆ ನಡೆಸುವ ದುರಾಲೋಚನೆ. ಭಾರತೀಯ ವೈದ್ಯಕೀಯ ಸಂಘದ ಪ್ರತಿಭಟನೆಯಿಂದಾಗಿ ಸದ್ಯಕ್ಕೆ ಕಾಯಿದೆ ಜಾರಿಗೆ ಬರದೆ ನಿರ್ಣಾಯಕ ಸಂಸದೀಯ ಆಯೋಗಕ್ಕೆ ಕಳುಹಿಸಲಾಗಿದೆ.

ಈಗ ಹೇಳಿ, ವೈದ್ಯರು ಆಗಾಗ್ಗೆ ಮುಷ್ಕರ ಮಾಡುತ್ತಿರುವುದು ಅವರ ತಪ್ಪೆ? ●